ಆ) ಹಾಗಿದ್ದಲ್ಲಿ, ಸರ್ಕಾರ ಈ ದಿಸೆಯಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಕರ್ನಾಟಕ ಸರ್ಕಾರ ದಿನಾಂಕ 1–4–2003ರಿಂದ ಸ್ಟ್ಯಾಂಪ್ ಚೀಟಿಗಳ (Adhesive Stamps) ಬಳಕೆಯನ್ನು ಸ್ಥಗಿತಗೊಳಿಸಿದೆ. ಸ್ಟ್ಯಾಂಪ್‌ಗಳ ಬಳಕೆಯನ್ನು ಸ್ಥಗಿತಗೊಳಿಸಿರುವುದರಿಂದ ಅಂಚೆ ಕಛೇರಿಗಳ ರೆವಿನ್ಯೂ ಸ್ಟ್ಯಾಂಪುಗಳು ಲಭ್ಯವಾಗುತ್ತಿಲ್ಲ.

ಆ) ರೆವಿನ್ಯೂ ಸ್ಟ್ಯಾಂಪ್ ಕೇಂದ್ರ ಸರ್ಕಾರದ ಪರಿವೀದಿಯಲ್ಲಿ ಯೂನಿಯನ್ ಲಿಸ್ಟ್‌ನಲ್ಲಿ ಬರುವ ಮುದ್ರಾಂಕ ಶುಲ್ಕವಾಗಿರುತ್ತದೆ. ಈ ಶುಲ್ಕ ವಸೂಲಾತಿಯನ್ನು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಮನ್ನಾ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಕೋರಿದೆ. ಭಾರತೀಯ ಮುದ್ರಾಂಕ ಕಾಯ್ದೆ 1899ರ ಕಲಂ 9 ರನ್ವಯ ಹೊರಡಿಸಬೇಕಾಗಿರುವ ಅಧಿಸೂಚನೆಯ ಕರಡನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಈ ವಿಷಯವು ಕೇಂದ್ರ ಸರ್ಕಾರದ ಮುಂದೆ ಇದ್ದು ಅಧಿಸೂಚನೆ ನಿರೀಕ್ಷಿಸಲಾಗಿದೆ.

ಕರ್ನಾಟಕ ರಾಜ್ಯ ಲಾಟರಿಯಿಂದ ಬಂದ ವರಮಾನ

213 (573) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸರ್ಕಾರವು ನಡೆಸುತ್ತಿರುವ ಲಾಟರಿಗಳು ಯಾವುವು;

ಆ) ಇದರಿಂದ 2003–2004ರಲ್ಲಿ ಬಂದ ವರಮಾನವೆಷ್ಟು;

ಇ) ಪ್ರತಿ ದಿನ 11 ಘಂಟೆಯಿಂದ, ತಾಸಿಗೊಂದು ಸಲ 10 ರೂ ಟಿಕೇಟಿನ ಲಾಟರಿಯನ್ನು ನಡೆಸಲು ಎಂದಿನಿಂದ ಪ್ರಾರಂಭಿಸಲಾಯಿತು;

ಈ) ಇದರಿಂದ ಬಡ ಜನರು ತಮ್ಮ ಸಂಪಾದನೆಯ ಹಣವನ್ನು ಪ್ರತಿ ದಿನ ಕಳೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಲಾಟರಿಯನ್ನು ನಿಲ್ಲಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ಕರ್ನಾಟಕ ರಾಜ್ಯ ಸರ್ಕಾರವು ಸಾಂಪ್ರದಾಯಿಕ ಹಾಗೂ ಗಣಕೀಕೃತ ನೆಟ್‌ವರ್ಕ್ ಲಾಟರಿಗಳನ್ನು ನಡೆಸುತ್ತಿದ್ದು, ದಿನಾಂಕ 15–7–2004 ರಿಂದ ಗಣಕೀಕೃತ ನೆಟ್‌ವರ್ಕ್ ಲಾಟರಿಯನ್ನು ನಿಲ್ಲಿಸಲಾಗಿದೆ.

ಆ) 1) ಸಾಂಪ್ರದಾಯಿಕ ಲಾಟರಿಯಿಂದ ಸರ್ಕಾರಕ್ಕೆ 2003–04ನೇ ಸಾಲಿನಲ್ಲಿ ಬಂದ ವರಮಾನ ರೂ. 50 ಕೋಟಿ.

2) 2003–04ನೇ ಅರ್ಥೀಕ ವರ್ಷದಲ್ಲಿ ಕರ್ನಾಟಕ ಗಣಕೀಕೃತ ನೆಟ್‌ವರ್ಕ್ ಲಾಟರಿಯಿಂದ ಸರ್ಕಾರಕ್ಕೆ ರೂ. 69.96 ಕೋಟಿಗಳಷ್ಟು ನಿವ್ವಳ ಆದಾಯ ಬಂದಿರುತ್ತದೆ.

ಇ) ಕರ್ನಾಟಕ ರಾಜ್ಯ ಲಾಟರಿಯು ಪ್ರತಿ ದಿನ ಬೆಳಗ್ಗೆ 11ರಿಂದ ಪ್ರಾರಂಭಿಸುವ 10 ರೂ. ಟಿಕೇಟಿನ ಲಾಟರಿಯನ್ನು ದಿನಾಂಕ 19–5–2003ರಿಂದ ಪ್ರಾರಂಭಿಸಲಾಗಿದೆ.

ಈ) ಇಲ್ಲ.

ಉ) ಇಲ್ಲ.